ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ SAMYUKTA KARNATAKA

# ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

ಶತಕದತ್ತ ಓಟ... ತೊಂಬತ್ತರ ನೋಟ

### ಶ್ರೀಮತಿ ಗಂಗಮ್ಮ ಸೋಮಪ್ಪ ಬೊಮ್ಮಾಯಿ ಟ್ರಸ್ಟ್ ಪ್ರಶಸ್ತಿ ಪ್ರದಾನ, ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ

# ತಾಯಿಯ ಋಣ ತೀರಿಸಲು ಸಾಧ್ಯವಿಲ್ಲ: ಹೊರಟ್ಟಿ

**ಹುಬ್ಬಳ್ಳಿ:** ತಾಯಿ ಋಣವನ್ನು ತೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಸರ್ವಸ್ವವನ್ನೂ ತ್ಯಾಗ ಮಾಡಿ ಮಕ್ಕಳ ಭವಿಷ್ಯಕ್ಕಾಗಿ ತನ್ನ ಇಡೀ ಜೀವನವನ್ನು ಸವೆಸುತ್ತಾಳೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಕುಸುಗಲ್ ರಸ್ತೆಯ ಶ್ರೀನಿವಾಸ ಗಾರ್ಡನ್‌ನಲ್ಲಿ ಶ್ರೀಮತಿ ಗಂಗಮ್ಮ ಸೋ. ಬೊಮ್ಮಾಯಿ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಪ್ರಶಸ್ತಿ ಪ್ರದಾನ ಹಾಗೂ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ತಾಯಿ ಎಂಬ ಹೆಸರಿಗೆ ಬಹಳ ಮಹತ್ವವಿದೆ. ಪಾಲಕರು ಇಂತಹ ಕಾರ್ಯಕ್ರಮಕ್ಕೆ ತಮ್ಮ ಮಕ್ಕಳನ್ನು ಕರೆದುಕೊಂಡು ಬರಬೇಕು. ಆಂದಾಗ ಮಾತ್ರ ಜೀವನ ಪದ್ಧತಿ, ಸಾಂಸ್ಕೃತಿಕ ಹಾಗೂ ಸಂಪ್ರದಾಯ ಅರಿಯಲು ಸಾಧ್ಯ. ತಮ್ಮ ಮಕ್ಕಳನ್ನು ರೆಸಿಡೆನ್ಸಿ ಶಾಲೆಗೆ ಸೇರಿಸುವುದರಿಂದ ಮಕ್ಕಳಿಗೆ ತಂದೆ-ತಾಯಿಯ ಕಷ್ಟ, ನೋವು ಅರಿಯಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿ ಅವರ ಹೆಸರು ಸೂರ್ಯ, ಚಂದ್ರರು ಇರುವವರೆಗೂ ಅಜರಾಮರ. ಅವರ ಮಗ ಬಸವರಾಜ ಬೊಮ್ಮಾಯಿ ಅವರ ಸಾಮಾಜಿಕ ಕಳಕಳಿ ಇಡೀ ನಾಡಿನ ಜನತೆಗೆ ಮಾದರಿಯಾಗಿದೆ ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ತಾಯಿಯ ಕೃಪೆಯಿಂದ ಬದುಕು ಹಸನಾಗಿದೆ. ತಾಯಿ ಮಗನ ಸಂಬಂಧ ದೇವರಿಗೂ ಮೀರಿದ್ದಾಗಿದ್ದು, ನನ್ನ ತಾಯಿ ಬಗ್ಗೆ ಇರುವ ಭಾವನೆಗಳನ್ನು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ ಎಂದರು.

ತಾಯಿ ಗಂಗಮ್ಮ ಅತ್ಯಂತ ಭಾವನಾತ್ಮಕವಾಗಿ ಆದರ್ಶವಿಟ್ಟುಕೊಂಡಿದ್ದರು. ದೊಡ್ಡ ದೇಶ ಪ್ರೇಮಿಯಾಗಿದ್ದರು. ತಮ್ಮ ನಡೆ-ನುಡಿಯಿಂದ ಬಹಳಷ್ಟು ಆದರ್ಶ ತೋರಿಸಿಕೊಟ್ಟಿದ್ದರು. ಸಾಹಿತ್ಯ ಪರಿಕರವನ್ನು ಜಗತ್ತಿಗೆ ಪರಿಚಯಿಸುವ ಉದ್ದೇಶ ಟ್ರಸ್ಟ್‌ನದ್ದಾಗಿದೆ. ತಾಯಿ ಋಣಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಹೇಳಿದರು.

ಚಂದ್ರಶೇಖರ ವಸ್ತ್ರದ ಬರೆದ 'ಸಾಮಾನ್ಯರ ಅಸಾಮಾನ್ಯ ಅವ್ವ' ಪುಸ್ತಕ ಅನಾವರಣಗೊಳಿಸಲಾಯಿತು. ಪ್ರಾಚಾರ್ಯ ರಮೇಶ ಕಲ್ಲನಗೌಡ ಪುಸ್ತಕ ಪರಿಚಯಿಸಿದರು. ಸಾಹಿತಿ ಹೇಮಾ ಪಟ್ಟಣಶೆಟ್ಟಿ ಅವರಿಗೆ 'ಅಕ್ಕ ಪ್ರಶಸ್ತಿ', ನೇಹಾ ರಾಮಾಪೂರ ಅವರಿಗೆ 'ಅರಳು ಮೊಗ್ಗು' ಹಾಗೂ ಹೊರೆಯಾಲ ದೊರೆಸ್ವಾಮಿ ಅವರಿಗೆ 'ಜಾನಪದ ಸಿರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಾಸಕರಾದ ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ, ಎಂ.ಆರ್. ಪಾಟೀಲ, ವಿ.ಪ. ಸದಸ್ಯ ಎಸ್.ವಿ. ಸಂಕನೂರ, ಮಲ್ಲಿಕಾರ್ಜುನ ಬೊಮ್ಮಾಯಿ ಇದ್ದರು.





ಹುಬ್ಬಳ್ಳಿ ಕುಸುಗಲ್ ರಸ್ತೆಯ ಶ್ರೀನಿವಾಸ ಗಾರ್ಡನ್‌ನಲ್ಲಿ ಶ್ರೀಮತಿ ಗಂಗಮ್ಮ ಸೋಮಪ್ಪ ಬೊಮ್ಮಾಯಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಹಾಗೂ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮಕ್ಕೆ ವಿ.ಪ. ಸಭಾಪತಿ ಬಸವರಾಜ ಹೊರಟ್ಟಿ ಚಾಲನೆ ನೀಡಿದರು. ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಶಾಸಕರಾದ ಅರವಿಂದ ಬೆಲ್ಲದ, ಎಂ.ಆರ್. ಪಾಟೀಲ, ಎಸ್.ವಿ. ಸಂಕನೂರ ಹಾಗೂ ಆಯೋಜಕರಾದ ಮಲ್ಲಿಕಾರ್ಜುನ ಬೊಮ್ಮಾಯಿ ಇದ್ದರು. ಸಾಹಿತಿ ಹೇಮಾ ಪಟ್ಟಣಶೆಟ್ಟಿ ಅವರಿಗೆ 'ಅಕ್ಕ ಪ್ರಶಸ್ತಿ', ನೇಹಾ ರಾಮಾಪೂರ ಅವರಿಗೆ 'ಅರಳು ಮೊಗ್ಗು' ಹಾಗೂ ಹೊರೆಯಾಲ ದೊರೆಸ್ವಾಮಿ ಅವರಿಗೆ 'ಜಾನಪದ ಸಿರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

### ಪ್ರೋತ್ಸಾಹ ಅಗತ್ಯ...

ಸಾಹಿತಿಗಳಿಗೆ ಪ್ರಶಸ್ತಿ ಪ್ರದಾನ ಮಾಡುವ ಸಂದರ್ಭದಲ್ಲಿ ಅವರಿಗೆ ನಗದು ರೂಪದಲ್ಲಿ ನೀಡುವ ಮೊತ್ತವನ್ನು ಹೆಚ್ಚಿಸದೇ, ಅವರು ಬರೆದ ಪುಸ್ತಕಗಳನ್ನು ಹೆಚ್ಚಾಗಿ ಖರೀದಿಸಿ ಪ್ರೋತ್ಸಾಹಿಸಬೇಕು. ಪ್ರಶಸ್ತಿ ಮೊತ್ತ ಹೆಚ್ಚಿಸಬೇಕು ಎಂಬ ಅಭಿಪ್ರಾಯ ಸೂಕ್ತವಲ್ಲ. ಪುಸ್ತಕಗಳನ್ನು ಹೆಚ್ಚು ಹೆಚ್ಚು ಖರೀದಿಸಿ ಓದಿದಾಗ ಸಾಹಿತಿಗಳಿಗೆ ಸಂತಸವಾಗುತ್ತದೆ. ಸಾಹಿತ್ಯ ಓದಿ ಅದನ್ನು ಪ್ರಶಂಸಿಸುವುದು ಸಾಹಿತಿಗಳಿಗೆ ನೀಡಿದ ದೊಡ್ಡ ಬಹುಮಾನವಿದ್ದಂತೆ ಎಂದು ಸಾಹಿತಿ ಹೇಮಾ ಪಟ್ಟಣಶೆಟ್ಟಿ ತಿಳಿಸಿದರು.

Hubli Edition

ಕನ್ನಡಪ್ರಭ

# ತಾಯಿ ಋಣ ತೀರಿಸಲು ಸಾಧ್ಯವಿಲ್ಲ

## ಪ್ರಶಸ್ತಿ ಪ್ರದಾನ, ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಬಸವರಾಜ ಹೊರಟ್ಟಿ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಮಕ್ಕಳ ಭವಿಷ್ಯಕ್ಕಾಗಿ ತನ್ನ ಇಡೀ ಜೀವನವನ್ನೇ ಸವೆಸುವ ತಾಯಿಯ ಋಣ ತೀರಿಸಿಲು ಯಾರಿಂದಲೂ ಸಾಧ್ಯವಿಲ್ಲ, ತಾಯಿ ಪಡುವ ಕಷ್ಟಕಾರ್ಪಣ್ಯಗಳು ತಿಳಿಯಲು ಬಾಲ್ಯದಿಂದಲೇ ಮಕ್ಕಳಿಗೆ ಅವಕಾಶ ಕೊಡಬೇಕು. ಬಾಲ್ಯದಲ್ಲೇ ರೆಸಿಡೆನ್ಸಿ ಸ್ಕೂಲ್‌ಗೆ ಹಾಕುವುದು ಸರಿಯಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಇಲ್ಲಿನ ಶ್ರೀನಿವಾಸ ಗಾರ್ಡನ್ಸಿನಲ್ಲಿ ಗಂಗಮ್ಮ ಸೋಮಪ್ಪ ಬೊಮ್ಮಾಯಿ ಟ್ರಸ್ಟ್ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಮತ್ತು ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಾಯಿಗೆ ಕ್ಷಮಾ ಗುಣ ಜನ್ಮತಃ ಇರುತ್ತದೆ. ತಾಯಿ ಮಾತ್ರ ಕ್ಷಮಿಸುತ್ತಾಳೆ. ಎಲ್ಲವನ್ನೂ ಸಹಿಸುವ ಭೂಮಿಗೂ ತಾಯಿ ಎಂದೇ ಕರೆಯುತ್ತಾರೆ. ಹಾಗೆಯೇ ಹರಿಯುವ ನದಿಗಳಿಗೂ ತಾಯಿ ಹೆಸರಿನಿಂದ ಕರೆಯುತ್ತಾರೆ. ಹೀಗೆ ಪ್ರತಿಯೊಂದರಲ್ಲೂ ತಾಯಿಯ ಮಹತ್ವ ತಿಳಿಸಿಕೊಡಲಾಗುತ್ತಿದೆ ಎಂದು ಹೇಳಿದರು.

ಜಗತ್ತಿನಲ್ಲಿ ಎಲ್ಲವನ್ನೂ ಪಡೆಯಬಹುದು. ಆದರೆ ಕಳೆದು ಹೋದ ತಾಯಿ ಪಡೆಯಲು ಸಾಧ್ಯವಿಲ್ಲ. ತಾಯಿ ಎನ್ನುವುದಕ್ಕೆ ಬಹಳಷ್ಟುಮಹತ್ವವಿದೆ. ಪಾಲಕರು ಇಂತಹ ಕಾರ್ಯಕ್ರಮಕ್ಕೆ ತಮ್ಮ ಮಕ್ಕಳ ಕರೆದುಕೊಂಡು ಬರಬೇಕು. ಅಂದಾಗ ಮಾತ್ರ ಜೀವನ ಪದ್ಧತಿ, ಸಂಸ್ಕಾರ ಹಾಗೂ ಸಂಪ್ರದಾಯ ಅನುಸರಿಸಲು ಸಾಧ್ಯವಾಗುತ್ತದೆ. ಬಹಳಷ್ಟು ಯುವಕರು ಕಾರ್ಯಕ್ರಮಗಳಿಂದಲೇ ಪ್ರೇರಣೆ ಪಡೆದು ತಂದೆ- ತಾಯಿಯಂದಿರನ್ನು ಚೆನ್ನಾಗಿ ನೋಡಿಕೊಳ್ಳುತ್ತಿರುವ ನೂರಾರು ಪ್ರಕರಣಗಳು ನಮ್ಮ ಕಣ್ಣೆದುರಿಗೆ ಇವೆ ಎಂದು ತಿಳಿಸಿದರು ಜತೆಗೆ ಕೆಲ ನೈಜ ಘಟನೆಗಳನ್ನು ವಿವರಿಸಿದರು.



ಹೇಮಾ ಪಟ್ಟಣಶೆಟ್ಟಿ,ನೇಹಾ ರಾಮಾಪುರ, ಹೊರೆಯಾಲ ದೊರೆಸ್ವಾಮಿ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಮಾಜಿ ಸಿಎಂ, ಶಾಸಕ ಬಸವರಾಜ ಬೊಮ್ಮಾಯಿ ಮಾತನಾಡಿ, ಜನ್ಮ ಪೂರ್ವದಲ್ಲಿ ಯಾವುದಾದರೂ ಸಂಬಂಧವಿದ್ದರೆ ಅದು ತಾಯಿ ಮತ್ತು ಮಗನದ್ದು. ಅವರೊಂದಗಿನಸಂಬಂಧದೇವರಿಗೆಮಿಗಿಲಾಗಿದ್ದು. ನನ್ನ ತಾಯಿ ಬಗ್ಗೆ ಇರುವ ಭಾವನೆಗಳನ್ನು ವ್ಯಕ್ತ ಮಾಡುವುದು ಶಬ್ದಗಳಿಂದ ಸಾಧ್ಯವಿಲ್ಲ ಎನ್ನುತ್ತ ತಾಯಿಯನ್ನು ಸ್ಮರಿಸುತ್ತ ಭಾವುಕರಾದರು.

ನಮ್ಮ ತಾಯಿ ಗಂಗಮ್ಮ ಅತ್ಯಂತ ಭಾವನಾತ್ಮಕವಾಗಿ ಆದರ್ಶ ಇಟ್ಟುಕೊಂಡಿದ್ದರು. ದೊಡ್ಡ ದೇಶ ಪ್ರೇಮಿಯಾಗಿದ್ದರು. ತಮ್ಮ ನಡೆನುಡಿಯಿಂದ ಬಹಳಷ್ಟು ಆದರ್ಶ ತೋರಿಸಿಕೊಟ್ಟಿದ್ದರು. ತಾಯಿ ಕೃಪೆಯಿಂದ ಬದುಕಾಗಿದ್ದು, ಆದರೆ, ಬದುಕಿಗಿಂತ ತಾಯಿತನ ದೊಡ್ಡದಾಗಿದೆ. ತಾಯಿಯ ಕರಳು, ಭಾವನೆ, ಗುಣಧರ್ಮ ಯಾವುದೇ ಜಾತಿ, ಧರ್ಮ, ದೇಶ ಹಾಗೂ ಭಾಷೆ ಬೇರೆ ಬೇರೆ ಇದ್ದರೂ ಸಂಬಂಧ, ಭಾವನೆ ಒಂದೇಯಾಗಿರುತ್ತದೆ ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ತಾಯಿ ಹೆಸರಿನಲ್ಲಿ ಶಿಕ್ಷಣ ಹಾಗೂ ಆರೋಗ್ಯ ಸಂಸ್ಥೆಗಳನು ಸ್ಥಾಪಿಸುವ ಯೋಜನೆ ಹಾಕಿಕೊಂಡಿರುವುದಾಗಿ ಪ್ರಕಟಿಸಿದರು.

> **ಸಾಹಿತಿಗಳಿಗೆ ನೀಡುವ ಪ್ರಶಸ್ತಿ ಮೊತ್ತ ಹೆಚ್ಚಿಸಬೇಕೆಂಬ ಬೇಡಿಕೆ ಸರಿಯಲ್ಲ, ಆದರೆ, ಪ್ರಶಸ್ತಿಗೆ ಆಯ್ಕೆಯಾದ ಸಾಹಿತಿಗಳ ಕನಿಷ್ಠ 100 ಪುಸ್ತಕಗಳನ್ನು ಸಂಸ್ಥೆಗಳು ಖರೀದಿಸಿ ಗ್ರಂಥಾಲಯ, ಓದುಗರಿಗೆ ನೀಡಿ ಸಾಹಿತ್ಯ ಪರಿಚಯಿಸಿದಾಗ ಮಾತ್ರ ಸಾಹಿತಿಗಳಿಗೆ ನೀಡುವ ದೊಡ್ಡ ಕೊಡುಗೆ.**
>
> • **ಹೇಮಾ ಪಟ್ಟಣಶೆಟ್ಟಿ,**
> ಅಕ್ಕ ಪ್ರಶಸ್ತಿ ಪುರಸ್ಕೃತರು.

ಈ ಸಂದರ್ಭದಲ್ಲಿ ಚಂದ್ರಶೇಖರ ವಸ್ತ್ರದ ಅವರ ಸಂಪಾದಕತ್ವದಲ್ಲಿ ರೂಪಿಸಿದ 'ಸಾಮಾನ್ಯರ ಅಸಾಮಾನ್ಯ ಅವ್ವ' ಪುಸ್ತಕ ಬಿಡುಗಡೆಗೊಳಿಸಲಾಯಿತು. ಪ್ರಾಚಾರ್ಯ ರಮೇಶ ಕಲ್ಲನಗೌಡ ಪುಸ್ತಕ ಪರಿಚಯಿಸಿದರು. ಸಾಹಿತಿ ಹೇಮಾ ಪಟ್ಟಣಶೆಟ್ಟಿ ಅವರಿಗೆ ಅಕ್ಕ ಪ್ರಶಸ್ತಿ, ಅರಳು ಮೊಗ್ಗು ಪ್ರಶಸ್ತಿಯನ್ನು ಬಾಲಕಿ ನೇಹಾ ರಾಮಾಪೂರ ಹಾಗೂ ಜಾನಪದ ಸಿರಿ ಪ್ರಶಸ್ತಿ ಹೊರೆಯಾಲ ದೊರೆಸ್ವಾಮಿ ಅವರಿಗೆ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಶಾಸಕರಾದ ಅರವಿಂದ ಬೆಲ್ಲದ, ಎಂ.ಆರ್.ಪಾಟೀಲ, ಎಸ್.ವಿ. ಸಂಕನೂರ, ಮಹೇಶ ತೆಂಗಿನ ಕಾಯಿ, ಮಾಜಿ ಸಂಸದ ಐ.ಜಿ. ಸನದಿ, ಮಲ್ಲಿಕಾರ್ಜುನ ಬೊಮ್ಮಾಯಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

HUBBALLI Edition